**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,**

**ಪೊನ್ನಂಪೇಟೆ**

**ಸಿ.ಸಿ. ನಂ. 203/2023 ಫ್ರಾ.ಸಾ -3**

**ಚಾ.ಸಾ – 1**

**ದಿನಾಂಕಃ 03.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಆದರ್ಶ |
| ತಂದೆಯ ಹೆಸರು | : | ವಿಜಯ |
| ವಯಸ್ಸು | : | 31 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಬಾಳೆಲೆ |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ–**

ನನ್ನ ತಂದೆ ಆಸ್ಪತ್ರೆಯಲ್ಲಿ ದಾಖಲಾಗಿದ್ದಾಗ, ಅವರು ಕೋಮಾದಲ್ಲಿದ್ದು ಬೆಂಗಳೂರಿನಲ್ಲಿ ಇರಬೇಕಾಯಿತು. ನಮ್ಮ ಕೆಲಸಗಾರರಾದ 1 ನೇ ಆರೋಪಿಯು 3 ದಿನಗಳಿಂದ ಕೆಲಸಕ್ಕೆ ಬಂದಿರುವುದಿಲ್ಲ ಎಂದು ಚಾಸಾ 2 ರವರು ಗೋದಾಮಿನ ಬಳಿ ಹೋಗಿ ನೋಡಿದಾಗ ಕಳ್ಳತನ ಆಗಿರುವುದು ತಿಳಿಸಿದರು. ದಿ. 03.11.2022 ರಂದು ಪೊನ್ನಂಪೇಟೆ ಪೊ. ಠಾಣೆಯಲ್ಲಿ ದೂರು ಕೊಟ್ಟಿರುತ್ತೇನೆ. 1 ನೇಆರೋಪಿಯನ್ನು ಪೊಲೀಸರು ಹಿಡಿದುಕೊಂಡು ಹೋದರು.

ಸಾಕ್ಷಿ ದೂರಿನಲ್ಲಿ ಸಹಿನೋಡಿ ಗುರುತಿಸಿದ್ದು ಅದನ್ನು ನಿಪಿ 4ಎಂದು, ಸಹಿಯನ್ನು ನಿಪಿ 4(ಎ) ಎಂದು ಗುರುತಿಸಲಾಯಿತು. ದೂರು ಕೊಟ್ಟ ದಿನದಂದೇ ಪೊಲೀಸರು ಮನೆಯ ಮುಂದೆ ಮಹಜರ್ ಮಾಡಿ 1 ನೇ ಆರೋಪಿಯನ್ನು ತಪ್ಪೊಪ್ಪಿ ಕೊಂಡಿರುತ್ತಾನೆ. ಸಾಕ್ಷಿ ಮಹಜರ್ ನಲ್ಲಿ ಸಹಿನೋಡಿ ಗುರುತಿಸಿದ್ದು ಅದನ್ನು ನಿಪಿ 5ಎಂದು, ಸಹಿಯನ್ನು ನಿಪಿ 5(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ, ಮಾನ್ಯ ಎಪಿಪಿರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ–**

ದೂರು ಕೊಟ್ಟ ದಿನವೇ 1 ನೇ ಆರೋಪಿಯನ್ನು ದಸ್ತಗಿರಿ ಮಾಡಿದರು ಎಂದರೆ ಸರಿ. ಅದೇ ದಿನ ಕದ್ದಿರುವ ಮೆಣಸನ್ನು ಗೋಣಿಕೊಪ್ಪ Zenith traders ರವರಿಗೆ ಮರಾಟ ಮಾಡಿರುವುದು ಗೊತ್ತಾಯಿತು ಎಂದರೆ ಸರಿ. ಅದೇ ದಿನ ಪೊಲೀಸರು Zenith traders ರವರಿಂದ ತಲಾ 40 ಕೆ ಜಿಯ 2 ಚೀಲ, 45 ಕೆ ಜಿ ಒಂದು ಚೀಲ, ಒಟ್ಟು 125 ಕೆ ಜಿ ಕರಿಮೆಣಸನ್ನು ವಶಕ್ಕೆ ಪಡೆದರು ಎಂದರೆ ಸರಿ. ಸದರಿ ಕರಿಮೆಣಸು ನನಗೆ ಸಿಕ್ಕಿರುವುದಿಲ್ಲ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಡಿ. ಆರ್. ಜೆ. ವಕೀಲರಿಂದಃ** ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡುವಾಗ ಗೈರು ಹಾಜರಾಗಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

Sd/–

ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂ., ಪೊನ್ನಂಪೇಟೆ